

# ಕಣ್ಣುಗಳು ಒಣಗುವುದೇಕೆ?

ಕಣ್ಣಿಗೆ ಅಗತ್ಯವಿರುವ ದ್ರವವು ಸರಿಯಾಗಿ ಪೂರೈಕೆಯಾಗದಿದ್ದಾಗ ಈ ಒಣಗಿದ ಕಣ್ಣು ಆಗುತ್ತದೆ. ಕಣ್ಣಿನ ಆರೋಗ್ಯ ಸ್ಥಿತಿಗೆ ಕಣ್ಣೀರು ಸತತವಾಗಿ ಉತ್ಪನ್ನವಾಗಬೇಕು. ಕೆಲವೊಮ್ಮೆ ಕಣ್ಣೀರು ಜಾಸ್ತಿ ಪ್ರಮಾಣದಲ್ಲಿ ಇದ್ದರೂ ಅದು ಆರೋಗ್ಯವಂತವಾಗಿರುವುದಿಲ್ಲ. ಆಗಲೂ ಒಣಗಿದ ಕಣ್ಣಿನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ.

**■ ಡಾ. ಎಚ್.ಎಸ್. ಮೋಹನ್**

ಇಪ್ಪತ್ತಾರು ವರ್ಷದ ಯುವತಿ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಕೆಲಸದಲ್ಲಿರುವಾಕೆ. ಪ್ರತಿದಿನ 8–9 ಗಂಟೆಗಳಾದರೂ ಕಂಪ್ಯೂಟರ್ ಮೊಬೈಲ್‌ಗಳಲ್ಲಿ ಕೆಲಸ ಮಾಡುತ್ತಿರುತ್ತಾಳೆ. ಕಳೆದ ಒಂದೆರಡು ತಿಂಗಳುಗಳಿಂದ ಈಕೆಯ ಕಣ್ಣಿನಲ್ಲಿ ವಿಪರೀತ ಉರಿ, ಏನೋ ಕಣ್ಣಿನಲ್ಲಿ ಕಸ ಹಾಕಿದ ಅನುಭವ. ಸಾಯಂಕಾಲ ಆದ ಕೂಡಲೇ ಕಣ್ಣು ಕೆಂಪಾಗುವುದು, ಬೆಳಿಗ್ಗೆ ಎದ್ದಾಗ ಕಣ್ಣಿನಲ್ಲಿ ಒಂದು ರೀತಿ ದ್ರವ ಬರುವುದು... ಈ ರೀತಿಯ ಲಕ್ಷಣಗಳು ಕಾಣಿಸಿಕೊಳ್ಳತೊಡಗಿತು. ಈ ಬಾರಿ ಊರಿಗೆ ಬಂದಾಗ ನನ್ನ ಕ್ಲಿನಿಕ್‌ಗೆ ಬಂದು ಕಣ್ಣಿನ ಪರೀಕ್ಷೆ ಮಾಡಿಸಿಕೊಂಡಳು. ಆಗ ಪತ್ತೆಯಾದದ್ದು ಈಕೆಗೆ ಒಣಗುವ ಕಣ್ಣು (**Dry Eyes**) ಕಾಯಿಲೆ ಇದೆ ಎಂದು.

ಇನ್ನೊಂದು ಉದಾಹರಣೆ ಗಮನಿಸಿ. ಈಕೆ 47 ವರ್ಷದ ಮಹಿಳೆ. ಈಕೆಗೆ ಕೆಲವು ತಿಂಗಳುಗಳಿಂದ ವಿಪರೀತ ಕಣ್ಣಿನ ಉರಿ, ಕಣ್ಣು ಆಗಾಗ ಕೆಂಪಾಗುವುದು, ಕಣ್ಣಿನ ಭಾಗದಲ್ಲಿ ವಿಪರೀತ ಕಡಿತ, ಕಣ್ಣಿನಲ್ಲಿ ಆಗಾಗ ನೀರು ಬಂದು ಪದೇ ಪದೇ ಕಣ್ಣನ್ನು ಒರೆಸಿಕೊಳ್ಳಬೇಕಾಗುತ್ತದೆ. ವಿವರವಾಗಿ ವಿಚಾರಿಸಿದಾಗ ಆಕೆಗೆ ವಿವಿಧ ಸಂಧುಗಳು (**Joints**) ನೋವು ಬಂದು ಒಂದು ರೀತಿಯ ಸಂಧಿವಾತದ ಕಾಯಿಲೆ (**Rheumatoid arthritis**) ಬಹಳ ವರ್ಷಗಳಿಂದಲೂ ಇದೆ. ಆ ಕಾಯಿಲೆಯಲ್ಲಿ ಆಗಾಗ ಒಣಗಿದ ಕಣ್ಣು ಕಾಣಿಸಿಕೊಳ್ಳುವುದು ಇದೆ. ಅದರ ಬಗ್ಗೆ ಸಂದೇಹ ಬಂದು ಪರೀಕ್ಷೆ ಮಾಡಿದಾಗ ನನ್ನ ಸಂದೇಹ ನಿಜವಾಗಿತ್ತು. ಆಕೆಗೆ ರುಮಾಟೈಡ್ ಆರ್ಥ್ರೈಟಿಸ್ ಕಾಯಿಲೆಯಿಂದ ಒಣಗಿದ ಕಣ್ಣು ಆಗಿತ್ತು.

## ಕಣ್ಣು ಒಣಗುವುದು ಎಂದರೇನು?

ಕಣ್ಣಿಗೆ ಅಗತ್ಯವಿರುವ ದ್ರವವು ಸರಿಯಾಗಿ ದೊರಕದಿದ್ದಾಗ ಅಥವಾ ಪೂರೈಕೆಯಾಗದಿದ್ದಾಗ ಈ ಒಣಗಿದ ಕಣ್ಣು ಆಗುತ್ತದೆ. ಕಣ್ಣಿನ ಆರೋಗ್ಯ ಸ್ಥಿತಿಗೆ ಕಣ್ಣೀರು ಸತತವಾಗಿ ಉತ್ಪನ್ನವಾಗಬೇಕು. ಕೆಲವೊಮ್ಮೆ ಕಣ್ಣೀರು ಜಾಸ್ತಿ ಪ್ರಮಾಣದಲ್ಲಿ ಇದ್ದರೂ ಅದು ಆರೋಗ್ಯವಂತವಾಗಿರುವುದಿಲ್ಲ. ಆಗಲೂ ಒಣಗಿದ ಕಣ್ಣಿನ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಈ ಲಕ್ಷಣಗಳು ಮೊದಲು ತಿಳಿಸಿದಂತೆ ಹೆಚ್ಚು ಹೊತ್ತು ಕಂಪ್ಯೂಟರ್ ಮತ್ತು ಮೊಬೈಲ್‌ನಲ್ಲಿ ತೊಡಗಿಸಿಕೊಳ್ಳುವವರಲ್ಲಿ, ಹವಾನಿಯಂತ್ರಿತ ಕೊಠಡಿಗಳಲ್ಲಿ ಬಹಳ ಹೊತ್ತು ಕೆಲಸ ಮಾಡುವವರಲ್ಲಿ, ವಿಮಾನದ ಮೇಲೆ ಪ್ರಯಾಣಿಸುವಾಗ ಕೆಲವರಿಗೆ ಈ ಅನುಭವ ಆಗುತ್ತದೆ. ಕೆಲವೊಮ್ಮೆ ಬಹಳ ದೂರ ಬೈಕ್‌ನಲ್ಲಿ ಪ್ರಯಾಣ ಮಾಡುವಾಗಲೂ ಈ ರೀತಿಯ ಅನುಭವ ಆಗಬಹುದು. ಈ ಕಾಯಿಲೆಯ ಮುಖ್ಯ ಲಕ್ಷಣಗಳೆಂದರೆ ಕಣ್ಣಿನಲ್ಲಿ ವಿಪರೀತ ಉರಿ ಆಗುವುದು, ಚುಚ್ಚುವುದು, ಕಣ್ಣಿನಲ್ಲಿ ಕಸ ಬಿದ್ದ ಅನುಭವ ಆಗುವುದು, ಆಗಾಗ ಕಣ್ಣು ಕೆಂಪಾಗುವುದು, ಕಣ್ಣಿನ ಬದಿಯ ಮೂಲೆಯಲ್ಲಿ ಒಂದು ರೀತಿಯ ದ್ರವದ ಶೇಖರಣೆ, ತೀವ್ರವಾದ ಬೆಳಕನ್ನು ನೋಡಲು ಕಣ್ಣು ಹೆದರುವುದು, ಕಾಂಟ್ಯಾಕ್ಟ್ ಲೆನ್ಸ್ ಹಾಕುವವರಿಗೆ ಅದನ್ನು ಹಾಕಲು ತೀವ್ರವಾದ ತೊಂದರೆ ಆಗುವುದು, ರಾತ್ರಿ ಹೊತ್ತು ವಾಹನ ಚಲಾಯಿಸಲು ವಿಪರೀತ ತೊಂದರೆ ಆಗುವುದು, ಕೆಲವೊಮ್ಮೆ